ಪ್ರಕಟಣೆ

ವಿಷಯ : ವಿಧಾನ ಸಭೆ : ಪರಿಷತ್ತಿನ ಕಾರ್ಯಕಲಾಪಗಳ ಸಮಿತಿಯ ಜಂಟಿ ಸಭೆ ತೀರ್ಮಾನ.

ಈ ದಿನ (24.09.2002) ವಿಧಾನಸಭೆಯನ್ನು ವಿಶೇಷ ಸಂದರ್ಭದಲ್ಲಿ ಕರೆದಿರುವುದು ತಮಗೆಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ. ಇಂದು ಬೆಳಿಗ್ಗೆ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಎರಡೂ ಸದನಗಳ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯು ಜಂಟಿಯಾಗಿ ಸಭೆ ಸೇರಿ ಸರ್ಕಾರದ ವತಿಯಿಂದ ಮತ್ತು ಇತರ ವಿರೋಧ ಪಕ್ಷಗಳ ನಾಯಕರಿಂದ ಎಲ್ಲಾ ವಿಷಯಗಳನ್ನು ಕೂಲಂಕಷವಾಗಿ ಚರ್ಚಿಸಿ ನಂತರ ಈ ಕೆಳಕಂಡ ತೀರ್ಮಾನಕ್ಕೆ ಬರಲಾಗಿದೆ.

ಕಾವೇರಿ ನೀರಿನ ಜಲ ವಿವಾದ ವಿಷಯವು ಸರ್ವೋಚ್ಚ ನ್ಯಾಯಾಲಯದ ಮುಂದೆ ಇದ್ದು, ಪುನಃ ಈ ವಿಚಾರವು ಸರ್ವೋಚ್ಚ ನ್ಯಾಯಾಲಯದ ಮುಂದೆ ದಿನಾಂಕ 30.09.2002 ರಂದು ವಿಚಾರಣೆಗೆ ಬರಲಿರುವುದು ಸರಿಯಷ್ಟೆ ಕಾವೇರಿ ನದಿ ನೀರಿನ ವಿವಾದ ಬಗ್ಗೆ ರಾಜ್ಯವು ಎದುರಿಸುತ್ತಿರುವ ಪರಿಸ್ಥಿತಿ ಬಗ್ಗೆ, ಬರ, ಬಾಗಲಕೋಟೆ ಸಂತ್ರಸ್ತರ ಬವಣೆ ಮತ್ತು ಮಾನ್ಯ ನಾಗಪ್ಪನವರ ಅಪಹರಣ ಈ ವಿಷಯಗಳೆಲ್ಲವನ್ನೂ ಸಹ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. ಕಾವೇರಿ ವಿಷಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಇರುವುದರಿಂದ ಮತ್ತು ಇತರ ವಿಷಯಗಳೂ ಸಹ ಇರುವುದರಿಂದ, ಎಲ್ಲಾ ವಿಷಯಗಳನ್ನೂ ನಾವು ಸುದೀರ್ಘವಾಗಿ ಫಲಪ್ರದವಾಗಿ ಚರ್ಚೆ ನಡೆಸಲು ಅಗತ್ಯವಾದ ಮಾಹಿತಿಗಳು ಈಗ ನಮ್ಮ ಮುಂದೆ ಇರುವುದಿಲ್ಲ. ಅಲ್ಲದೆ ಕಾವೇರಿ ಪ್ರಾಧಿಕಾರದ ಉಸ್ತುವಾರಿ ಸಮಿತಿಯನ್ನೂ ಸಹ ಕೇಂದ್ರ ಸರ್ಕಾರದವರು ನಮ್ಮ ಜಲಾಶಯಗಳಲ್ಲಿರುವ ನೀರಿನ ಬಗೆಗೆ ಮಾಹಿತಿ ಸಂಗ್ರಹಿಸಲು ಕಳುಹಿಸಿಕೊಟ್ಟಿದ್ದಾರೆ. ಯಾವ್ಯಾವ ಜಲಾಶಯಗಳಲ್ಲಿ ಎಷ್ಟೆಷ್ಟು ನೀರು ಇದೆ ಎಂಬ ಮಾಹಿತಿ ಈಗ ನಮ್ಮ ಮುಂದೆ ಇಲ್ಲ. ಫಲಪ್ರದವಾದ ಚರ್ಚೆಯನ್ನು ನಾವು ನಡೆಸಬೇಕಾಗಿದ್ದರೆ ಈ ಎಲ್ಲಾ ಮಾಹಿತಿಗಳು ನಮಗೆ ಬೇಕಾಗುತ್ತದೆ. ಆದುದರಿಂದ, ಕಾವೇರಿ ವಿಷಯ ಮತ್ತು ಯಾವ್ಯಾವ ಇತರ ವಿಷಯಗಳು ಜರೂರಾಗಿ ಚರ್ಚೆಯಾಗಬೇಕೋ ಅವೆಲ್ಲವನ್ನೂ ಅಕ್ಟೋಬರ್ ತಿಂಗಳಿನಲ್ಲಿ ಎರಡೂ ಸದನಗಳನ್ನು ಕರೆದು ಚರ್ಚೆಮಾಡಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಈ ತೀರ್ಮಾನಕ್ಕೆ ಸಹಕಾರ ಕೊಟ್ಟ ಸರ್ಕಾರಕ್ಕೆ, ಎಲ್ಲಾ ವಿರೋಧ ಪಕ್ಷದ ನಾಯಕರುಗಳಿಗೆ ಮತ್ತು ಇತರ ಸದಸ್ಯರುಗಳಿಗೆ ವಂದನೆಗಳು.

ಈ ತೀರ್ಮಾನಕ್ಕೆ ಸದನದ ಸಹಮತಿ ಇದೆ ಎಂದು ಭಾವಿಸುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ಎಲ್ಲಾ ಪಕ್ಷದ ನಾಯಕರನ್ನೂ ಕರೆದು ತಾವು ಒಂದು ತೀರ್ಮಾನ ತೆಗೆದುಕೊಂಡಿದ್ದೀರಿ. ಇವತ್ತು ನಾವು ಶಾಸನ ಸಭೆಯನ್ನು ಕರೆದಿದ್ದೇವೆ. ಶಾಸನ ಸಭೆಯ ಮಹತ್ವವನ್ನೂ ಕೂಡ ನಾವು ಅರಿಯಬೇಕು. ಶಾಸನ ಸಭೆಗೆ ಅದರದ್ದೇ ಆದ ಒಂದು ಮಹತ್ವ ಇದೆ. ಇದು ಯಾವುದೋ ಒಂದು ಜನರಲ್ ಬಾಡಿ ಮೀಟಿಂಗ್ ಅಲ್ಲ. ಒಂದು ಶಾಸನ ಸಭೆ ಕರೆಯುವಾಗ ಯೋಚಿಸಿಬಿಟ್ಟು ಸಭೆ ಕರೆಯಬೇಕೇ ಹೊರತು, ಸಭೆ ಕರೆದು ಯೋಚಿಸಲು ಹೋಗಬಾರದು. ಇವತ್ತು ಇದೊಂದು ದುರಂತ. ತಾವು ಹೇಳಿರುವುದನ್ನು ನಾನು ಒಪ್ಪಿಕೊಂಡರೂ, ಸಬ್ ಜ್ಯೂಡೀಸ್ ಎಂಬ ಅಂಶವನ್ನು ಪಕ್ಕಕ್ಕೆ ಇಟ್ಟರೂ ಕೂಡ ಇವತ್ತು ರಾಜ್ಯದ ಬರದ ಬಗ್ಗೆ ಚರ್ಚೆ ನಾವು ಮಾಡಬಹುದಾಗಿದೆ. ಜನ ಸುತ್ತಲೂ ನೋಡಿ ನಮ್ಮನ್ನು ನಗುತ್ತಾರೆ. ಸಭೆ ಕರೆಯುತ್ತಾರೆ, ಸಂತಾಪ ಸೂಚಿಸುತ್ತಾರೆ, ನಂತರ ಮುಂದೂಡುತ್ತಾರೆ ಎಂದು.

ಶ್ರೀ ಎಶ್ವೇಶ್ವರ ಹೆಗಡೆ ಕಾಗೇರಿ : ಬರದ ಬಗ್ಗೆ ಚರ್ಚೆಯಾಗಬೇಕು.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ನಾನು ನನ್ನ ಅಭಿಪ್ರಾಯವನ್ನು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಇದು ಸರ್ವಾನುಮತದ ತೀರ್ಮಾನವಾಗಿರುವುದರಿಂದ ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 12.25ಕ್ಕೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು)

3 ತಡವಾಗಿ ಬಂದ ಪ್ರಶ್ನೋತ್ತರಗಳು

Kharab land in Sy.No. 180 of Bheemanakuppe Village Kengerel Hobli, Bangalore South

176 (657) Sri R. Ashok (Utharhalli) Minister for Revenue

a) What is the extent of Kharab land in Sy. No. 180 od Bheemanakuppe Village, Kengerel Hobli, Bangalore South Taluk;

b) What is the extent of land granted to the farmers (Furnish details of the beneficiaries)?

c) If so, has it come to the notice of the Govt. that the land is granted to Bettanapalya Village based on the false documents> (Furnish details);

d) Whether the original beneficiaries are cultivating these lands or the land has been sold to others? (Furnish details);

Sri H.C. Shri Kantaiah (Minister for Revenue):

a) The extent of Govt. land In Sy. No. 180 of Bheemanakuppe Village is 75.15 acres.

b) Totally an extent of 18 acres of Land has been granted to 17 persons. (The details of the beneficiaries are furnished in the annexure).

c) Yes. False documents have been cancelled after conducting an enquiry in accordance with section 136 (3) of Karnataka Land Revenue Act, 1964.

d) No

ಅನುಬಂಧ

ಪ್ರಶ್ನೆ ಸಂಖ್ಯೆ 657

Annexure

ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ಬೀಮನಕುಪ್ಪೆ ಗ್ರಾಮದ ಸ.ನಂ. 180ರಲ್ಲಿ ಜಮೀನು ಮಂಜೂರಿಯಾಗಿರುವ ಫಲಾನುಭವಿಗಳ ಪಟ್ಟಿ.

ಕ್ರಮ ಸಂಖ್ಯೆ	ಸರ್ವೆ ನಂಬರ್	ಮಂಜೂರಿ ವಿಸ್ತೀರ್ಣ	ಮಂಜೂರಿದಾರರ ಹೆಸರು	ತಂದೆ : ಗಂಡನ ಹೆಸರು
1)	180	1-00	ಓಬಿಳಯ್ಯ	ಸಿದ್ದಪ್ಪ